Date: 17-03-2025 OS No. 198/2023

( PW-1 )

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು:ಶ್ರೀ ಬಿ.ಬಿ.ಬಿ. ವಕೀಲರಿಂದ ಪ್ರತಿವಾದಿಯರ ಪರಃ

ನಾನು ಪಿ.ಯು.ಸಿ 2ನೇ ವರ್ಷ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರ ನಮ್ಮ ವಕೀಲರು ತಯಾರಿಸಿದಂತೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ, ನಾನೆ ಹೇಳಿ ಬರೆಸಿದ್ದೇನೆ. ನನ್ನ ಮೂಲ ಉದ್ಯೋಗ ಒಕ್ಕಲುತನ. ನಾನು ವ್ಯವಸಾಯ ಮಾಡುತ್ತೇನೆ ಅಂತ ತೋರಿಸಲು ಯಾವುದೆ ದಾಖಲೆಗಳನ್ನು ಕೋರ್ಟಿಗೆ ಹಾಜರು ಮಾಡಿಲ್ಲ. ನಮ್ಮ ಮನೆತನಕ್ಕೆ 2 ಎಕರೆ, 25 ಗುಂಟೆ ಜಮೀನು ಇದೆ, ಅದನ್ನು ನಾನೆ ಸಾಗು ಮಾಡುತ್ತೇನೆ. ನಮ್ಮ ಜಮೀನಿನ ಸ.ನಂ.111/4, ಮದಿಹಳ್ಳಿಯಲ್ಲಿ ಇರುತ್ತದೆ. ನಾನು ಪ್ರತಿವಾದಿಯರಿಂದ ಜಮೀನು ಕ್ರಯಕ್ಕೆ ತೆಗೆದುಕೊಂಡಿದ್ದೇನೆ, ಆ ವಿಷಯವಾಗಿ ಈ ಕೇಸು ಹಾಕಿದ್ದೇನೆ. ನಮ್ಮ ಮತ್ತು ಪ್ರತಿವಾದಿಯರ ಮನೆಯ ಮಧ್ಯ ಸುಮಾರು 3-4 ಕಿ.ಮೀ ಅಂತರವಿದೆ ಅಂದರೆ ಸರಿಯಲ್ಲ, 1.1/2 ಕಿ.ಮೀ ದೂರ ಇರುತ್ತದೆ. ದಾವೆದ ಆಸ್ತಿ ಮದಿಹಳ್ಳಿಯಲ್ಲಿ ಕುರುಬರ ಓಣಿಯಲ್ಲಿ ಇರುತ್ತದೆ, ಈ ಬಗ್ಗೆ ದಾಖಲೆ ಹಾಜರು ಪಡಿಸಿದ್ದೇನೆ. ನಾನು ಹಾಜರು ಪಡಿಸಿದ ಪಿಪಿಸಿ ಉತಾರದಲ್ಲಿ ದಾವೆದ ಆಸ್ತಿ ಕುರುಬರ ಓಣಿಯಲ್ಲಿ ಇದೆ ಅಂತ ನಮೂದಿಸಿಲ್ಲ. ನಿಪಿ-1 ಕರಾರು ಪತ್ರದಲ್ಲಿ ದಾವೆದ ಆಸ್ತಿ ಮದಿಹಳ್ಳಿ ಗ್ರಾಮದಲ್ಲಿ ಕುರುಬರ ಓಣಿಯಲ್ಲಿದೆ ಅಂತ ಬರೆದಿಲ್ಲ. ದಾವೆದ ಆಸ್ತಿ ಉತ್ತರ-ಧಕ್ಷಿಣ 71.05 ಅಡಿ ಮತ್ತು ಪೂರ್ವ-ಪಶ್ಚಿಮ 48.05 ಅಡಿ ಇರುತ್ತದೆ. ನಿಪಿ-9 ದಾವೆದ ಆಸ್ತಿ ಉತಾರದಲ್ಲಿ ಸದರಿ ಅಳತೆ ನಮೂದಿಸಿಲ್ಲ ಅಂದರೆ ನಿಜ. ದಾವೆದ ಆಸ್ತಿ ಉತಾರದಲ್ಲಿ ನಾನು ಹೇಳಿದ ಅಳತೆ ಇರದೆ ಇದ್ದರೂ ಸಹ, ನಿಪಿ-1 ರಲ್ಲಿ ಸದರಿ ಅಳತೆ ಬರೆಸಿದ್ದೇವೆ ಅಂದರೆ ಸಾಕ್ಷಿ ಪ್ರತಿವಾದಿಯರೆ ನಿಪಿ-1 ರಲ್ಲಿ ದಾವೆದ ಆಸ್ತಿಯ ಅಳತೆ ಬರೆಸಿದ್ದಾರೆ ಅಂತ ಹೇಳುತ್ತಾರೆ. ದಾವೆದ ಆಸ್ತಿಯ ಪೂರ್ವಕ್ಕೆಃ ಶೈರಾ ಗೈಬುಸಾಬ ಸನದಿ ಇವರ

ಮನೆ ಇದೆ, ನಿಪಿ-1 ರಲ್ಲಿ ಪೂರ್ವಕ್ಕೆ ಸದರಿ ಶೈರಾ ಗೈಬುಸಾಬ ಸನದಿ ಇವರ ಆಸ್ತಿ ಅಂತ ಬರೆದಿದೆ ಅಂದರೆ ಸಾಕ್ಷಿ ಪ್ರತಿವಾದಿಯರೆ ಬರೆಸಿದ್ದಾರೆ ಅಂತ ಹೇಳುತ್ತಾರೆ. ದಾವೆದ ಆಸ್ತಿಯ ಪಶ್ಚಿಮಕ್ಕೆಃ ಸತ್ಯಪ್ಪ ಬಾಳಪ್ಪ ವಿಭೂತಿ ಇವರ ಮನೆ ಇದೆ. ಕರಾರು ಪತ್ರದಲ್ಲಿ ಅವರ ಮನೆ ಇದೆ ಅಂತ ಬರೆಸಿಲ್ಲ ಅಂದರೆ ಪ್ರತಿವಾದಿಯರು ಹೇಳಿ ಬರೆಸಿದ್ದಾರೆ ಅಂತ ಹೇಳುತ್ತಾರೆ. ದಾವೆದ ಆಸ್ತಿ ಧಕ್ಷಿಣಕ್ಕೆಃ ರಸ್ತೆ ಇರುತ್ತದೆ ಮತ್ತು ಉತ್ತರಕ್ಕೆಃ ಅರ್ಜುನ ಬಾಗಿ ಇವರ ಜಮೀನು ಇರುತ್ತದೆ.

ದಾವೆದ ಆಸ್ತಿಯ ಕ್ರಯದ ಮಾತುಕತೆ ದಿಃ 29.01.2022 ರಂದು ಆಗಿರುತ್ತದೆ, ಅದೆ ದಿನ ಕರಾರು ಬರೆಸಿದ್ದೇವೆ. ದಾವೆದ ಆಸ್ತಿ ಪ್ರತಿವಾದಿಯರು ನನಗೆ ಮಾರಾಟ ಮಾಡಲು ಒಪ್ಪಿದ ನಂತರ ಕರಾರು ಪತ್ರ ಬರೆಸಿದ್ದೇವೆ. ಕರಾರು ಪತ್ರ ಬರೆಯುವ ಹಿಂದಿನ ದಿನ ಪ್ರತಿವಾದಿಯರು ನಮ್ಮ ಮನೆಗೆ ಬಂದು ತಮ್ಮ ಆಸ್ತಿ ಮಾರಾಟ ಮಾಡುವ ಬಗ್ಗೆ ಹೇಳಿದ್ದರು, ದಾವೆದ ಆಸ್ತಿ ಪ್ರತಿವಾದಿಯರು 8 ಲಕ್ಷ ರೂಗೆ ಮಾರಾಟ ಮಾಡಲು ಹೇಳಿದ್ದರು. ಆ ನಂತರ ನಾವು 6 ಲಕ್ಷ ರೂಗೆ ತೆಗೆದುಕೊಳ್ಳಲು ಒಪ್ಪಿದ್ದೆವು. ನಮಗಿಂತ ಮೊದಲು ದಾವೆದ ಆಸ್ತಿಯನ್ನು ಯಾರು ಖರೀದಿಸಲು ಕೇಳಿದ್ದರು ಅಂತ ನನಗೆ ಗೊತ್ತಿಲ್ಲ. ಪ್ರತಿವಾದಿಯರು ದಾವೆದ ಆಸ್ತಿ ಮಾರಾಟ ಮಾಡುವ ವಿಷಯ ಗುರುಸಿದ್ದ ಮಾಯಪ್ಪ ಬಾಗಿ ಇವರ ಮುಖಾಂತರ ನನಗೆ ಹೇಳಿದ್ದರು. ದಾವೆದ ಆಸ್ತಿ ಮಾರಾಟ ಮಾಡುವ ಬಗ್ಗೆ ಪ್ರತಿವಾದಿಯರು ಪೇಪರಿನಲ್ಲಿ ಪ್ರಕಟಣೆ ಹೊರಡಿಸಿರಲಿಲ್ಲ. ಪ್ರತಿವಾದಿಯರ ಕುಟುಂಬದಲ್ಲಿ ಒಟ್ಟು 5 ಜನ ವಾಸ ಇದ್ದಾರೆ, ಅವರೆಂದರೆ ಮಾಸಾಯಿ, ರಾಜು, ಮಲೀಕ ಜಮಾದಾರ ಇನ್ನೊಬ್ಬರ ಹೆಸರು ನನಗೆ ಗೊತ್ತಿಲ್ಲ. ಮಲೀಕ ಮತ್ತು ಬಿಲಾಲ ಕರಾರು ಪತ್ರ ಬರೆದುಕೊಟ್ಟಿಲ್ಲ ಅಂದರೆ ನಿಜ. ಕರಾರು ಪತ್ರಕ್ಕೆ 1ನೇ ಪ್ರತಿವಾದಿಯ ಉಳಿದ ಮಕ್ಕಳಾದ ಮಲೀಕ ಮತ್ತು ಬಿಲಾಲ

<u>( PW-1 )</u>

ಇವರ ಒಪ್ಪಿಗೆ ಪಡೆದಿಲ್ಲ ಅಂದರೆ ಸಾಕ್ಷಿ ದಾವೆದ ಆಸ್ತಿ 1ನೇ ಪ್ರತಿವಾದಿಯ ಆಸ್ತಿ ಇರುವುದರಿಂದ ತೆಗೆದುಕೊಂಡಿಲ್ಲ ಅಂತ ಹೇಳುತ್ತಾರೆ. ದಾವೆದ ಆಸ್ತಿಯನ್ನು ಪ್ರತಿವಾದಿಯರು ಮತ್ತು ಅವರ ಕುಟುಂಬದ ಸದಸ್ಯರು ಉಪಭೋಗ ಮಾಡುತ್ತಿದ್ದಾರೆ ಅಂದರೆ ನಿಜ. ದಾವೆದ ಆಸ್ತಿ ಹೊರತುಪಡಿಸಿ ಪ್ರತಿವಾದಿಯರಿಗೆ ಬೇರೆ ಆಸ್ತಿ ಇಲ್ಲ ಅಂದರೆ ಸರಿಯಲ್ಲ. 1ನೇ ಪ್ರತಿವಾದಿ ಒಳ್ಳೆಯ ಸ್ವಭಾವದ ಹೆಣ್ಣು ಮಗಳು ಅಂದರೆ ನಿಜ. 1ನೇ ಪ್ರತಿವಾದಿ ಸ್ಥಿತಿವಂತಳಿದ್ದು, ಅವಳಿಗೆ ಯಾವುದೆ ಅಡಚಣೆ ಇಲ್ಲ ಅಂದರೆ ಸಾಕ್ಷಿ ಅವರಿಗೆ ಅಡಚಣೆ ಇರುವುದರಿಂದ ಆಸ್ತಿ ಮಾರಾಟ ಮಾಡಿದ್ದಾರೆ ಅಂತ ಹೇಳುತ್ತಾರೆ.

ದಾವೆದ ಆಸ್ತಿ ಪ್ರತಿವಾದಿಯರಿಗೆ 1ನೇ ಪ್ರತಿವಾದಿ ತಾಯಿ ನೂರಜಾನಬಿ ಇವಳಿಂದ ಬಂದಿರುತ್ತದೆ. ದಾವೆದ ಆಸ್ತಿ ಪ್ರತಿವಾದಿಯರಿಗೆ ಗ್ರಾಮ ಪಂಚಾಯತಿಯಿಂದ ಮಂಜೂರಾದಂತ ಆಶ್ರಯ ಮನೆ ಇರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರ ದಾವೆದ ಆಸ್ತಿ ಹಳೆಯದಾಗಿದ್ದು, ಗ್ರಾಮ ಪಂಚಾಯತಿಯಿಂದ ಹೊಸಮನೆ ಮಂಜೂರು ಮಾಡಿಸಿಕೊಡುತ್ತೀವಿ ಅಂತ ಹೇಳಿ ಸುಳ್ಳು ಕ್ರಯದ ಕರಾರು ಪತ್ರ ಸೃಷ್ಟಿಸಿಕೊಂಡಿದ್ದೇವೆ ಅಂದರೆ ಸರಿಯಲ್ಲ. ಕರಾರು ಪತ್ರ ಬರೆಸುವ ದಿನ ಕ್ರಯಪತ್ರ ಮಾಡಿಕೊಡಲು ಯಾವುದೆ ತೊಂದರೆ ಇರಲಿಲ್ಲ ಅಂದರೆ ಸಾಕ್ಷಿ, ಆ ಕಾಲಕ್ಕೆ ದಾವೆದ ಆಸ್ತಿ ಉತಾರ ರೆಡಿ ಆಗಿರಲಿಲ್ಲ ಅಂತ ಹೇಳುತ್ತಾರೆ. ಆಗ ಸಾದಾ ಪಿಪಿಸಿ ಉತಾರ ಮಾತ್ರ ಇತ್ತು. ಕರಾರು ಪತ್ರದಲ್ಲಿ ಕ್ರಯಪತ್ರ ಒಂದು ವರ್ಷದ ಒಳಗೆ ಮಾಡಿಕೊಡುವಂತೆ ನಿಗದಿಪಡಿಸಲಾಗಿತ್ತು. ಸದರಿ ಅವಧಿಯಲ್ಲಿ ನಾನು ಪ್ರತಿವಾದಿಯರಿಗೆ ಕ್ರಯಪತ್ರ ಬರೆದುಕೊಡುವಂತೆ ಕೇಳಿದ್ದೆ, ಆದರೆ ಅವರು ಇಂದು-ನಾಳೆ ಅಂತ ಮುಂದೂಡುತ್ತಾ ಬಂದಿರುತ್ತಾರೆ. ಒಂದು ವರ್ಷ ಕಳೆದ ನಂತರ ನಾನು ಪ್ರತಿವಾದಿಯರಿಗೆ ನೋಟಿಸು

ಕೊಟ್ಟಿದ್ದೇನೆ, ಏಪ್ರಿಲ್ 2023 ರಲ್ಲಿ ನೋಟಿಸ್ ಕೊಟ್ಟಿದ್ದೇನೆ. ನಾನು ನೋಟಿಸ್ ಕೊಡುವ ಮೊದಲು 1ನೇ ಪ್ರತಿವಾದಿಯನ್ನು ಕ್ರಯಪತ್ರ ಮಾಡಿಕೊಡುವಂತೆ ಕೇಳಿದ್ದೆ, ಆದರೆ ಅವರು ಇಂದು-ನಾಳೆ ಅಂತ ಹೇಳಿದರು. ಕರಾರು ಪತ್ರ ಬರೆಸುವ ಕಾಲಕ್ಕೆ ಪ್ರತಿವಾದಿಯರು ಎಲ್ಲಿ ಸಾಲ ಮಾಡಿದ್ದರು ಮತ್ತು ಯಾವ ಮಕ್ಕಳ ಶಿಕ್ಷಣದ ಸಲುವಾಗಿ ಹಣ ಬೇಕಾಗಿತ್ತು ಅಂದರೆ ಸಾಕ್ಷಿ ಸದರಿ ವಿಷಯ ಪ್ರತಿವಾದಿಯರೆ ಬರೆಸಿಕೊಟ್ಟಿದ್ದಾರೆ ಅಂತ ಹೇಳುತ್ತಾರೆ. ಪ್ರತಿವಾದಿಯರಿಗೆ ಯಾವುದೆ ಅಡಚಣೆ ಇರಲಿಲ್ಲ ಅಂದರೆ ಸರಿಯಲ್ಲ, ಪ್ರತಿವಾದಿಯರಿಗೆ ಯಾವ ಯಾವ ಅಡಚಣೆಗಳು ಇದ್ದರವು ಅಂತ ನಾನು ವಿಚಾರಿಸಿಲ್ಲ.

ನಿಪಿ-1 ಬರೆಸುವ ಕಾಲಕ್ಕೆ ನಾನು, ಪ್ರತಿವಾದಿಯರು ಮತ್ತು ಸಾಕ್ಷಿಧಾರರಾದ ಗುರುಸಿದ್ದ ಮಾಯಪ್ಪ ಬಾಗಿ, ಲಕ್ಷ್ಮಣ ಕಾಂಬಳೆ ಮತ್ತು ಹೂವಪ್ಪ ಬಾಗಿ ಹಾಜರಿದ್ದರು. ನಿಪಿ-1ನ್ನು ಎ.ಡಿ.ನಾಡಗೌಡ ವಕೀಲರು ಬರೆದಿದ್ದಾರೆ, ಸದರಿ ನಿಪಿ-1ನ್ನು ಹುಕ್ಕೇರಿಯ ತಹಸೀಲ್ದಾರ ಕಚೇರಿ ಹತ್ತಿರ ಬರೆದು, ಕೋರ್ಟ್ ಆವರಣದಲ್ಲಿ ನೋಟರಿ ಮಾಡಿಸಿದ್ದಾರೆ. ಪ್ರತಿವಾದಿಯರೆ ನಿಪಿ-1ನ್ನು ಬರೆಸಿಕೊಟ್ಟಿದ್ದಾರೆ. ನನಗೆ ಸಾಕ್ಷಿಧಾರರಾದ ಗುರುಸಿದ್ದ ಬಾಗಿ ಮತ್ತು ಹೂವಪ್ಪ ಬಾಗಿ ಇವರು ಸಂಬಂಧಿಕರು ಇರುತ್ತಾರೆ ಅಂದರೆ ನಿಜ. ಲಕ್ಷ್ಮಣ ಕಾಂಬಳೆ ನನ್ನ ಆತ್ಮೀಯ ಗೆಳೆಯ ಅಂದರೆ ನಿಜ. ನಾನು ಕರಾರು ಪತ್ರ ಮಾಡಿಕೊಳ್ಳುವ ದಿನ ದಾವೆದ ಆಸ್ತಿಯನ್ನು ಖರೀದಿಸಲು ನನ್ನನ್ನು ಹೊರತುಪಡಿಸಿ, ಬೇರೆ ಯಾರು ಬಂದಿರಲಿಲ್ಲ. ಕರಾರು ಪತ್ರ ಬರೆಸುವ ದಿನ ನನ್ನ ಕಡೆಯಿಂದ ಗುರುಸಿದ್ದ ಬಾಗಿ ಹಾಜರಿದ್ದು, ಸಹಿ ಮಾಡಿದ್ದಾರೆ. ಕರಾರು ಪತ್ರ ಬರೆಸುವ ದಿನ ನಾನು ಪ್ರತಿವಾದಿಯರಿಗೆ 5,50,000/- ರೂ ಕೊಟ್ಟಿದ್ದೇನೆ, ಸದರಿ ಹಣ ಬ್ಯಾಂಕಿನಿಂದ ತಂದಿರಲಿಲ್ಲ, ನಮ್ಮ ಮನೆಯಲ್ಲಿ ಇದ್ದ ಹಣ ಕೊಟ್ಟಿದ್ದೇನೆ. ಸದರಿ ಹಣ 500/-ರೂ

( PW-1 )

ಮುಖಬೆಲೆಯ ಹನ್ನೊಂದು ನೂರು ನೋಟುಗಳು ಇದ್ದವು. 20 ಸಾವಿರ ರೂ ಮೇಲ್ಪಟ್ಟ ವ್ಯವಹಾರ ಬ್ಯಾಂಕ್ ಮುಖಾಂತರ ಮಾಡಬೇಕು ಅಂದರೆ ನಿಜ. ನಮ್ಮ ಹತ್ತಿರ ಗೋವಿನ ಜೋಳ, ಸೋಯಾಬಿನ ಮತ್ತು ಅರಿಶಿಣ ಬೆಳೆಗಳ ಹಣ ಇದ್ದುದ್ದರಿಂದ ಅದನ್ನೆ ಬ್ಯಾಂಕ್ ಕೊಡುವುದು ವಿಳಂಬವಾಗುತ್ತದೆ ಅಂತ ನಗದು ರೂಪದಲ್ಲಿ ಕೊಟ್ಟಿದ್ದೇನೆ. ನಾವು ಜಮೀನಿನಲ್ಲಿ ಬೆಳೆದ ಬೆಳೆಗಳನ್ನು ಸ್ಥಳೀಯ ವರ್ತಕರಿಗೆ ಮಾರಾಟ ಮಾಡುತ್ತೇವೆ, ಅವರು ಬೆಳೆ ಖರೀದಿಸಿದ ಬಗ್ಗೆ ಒಂದು ಕಚ್ಚಾ ರಶೀದಿ ಕೊಡುತ್ತಾರೆ, ಅದನ್ನು ಹಾಜರುಪಡಿಸಿಲ್ಲ. ಸದರಿ ರಶೀದಿಗಳು ನಮ್ಮ ಹತ್ತಿರ ಇರದೇ ಇದ್ದುದ್ದರಿಂದ ಹಾಜರು ಮಾಡಿಲ್ಲ. ದಾವೆದ ಆಸ್ತಿಯ ಉತಾರ ಪ್ರತಿವಾದಿಯರೆ ತೆಗೆದುಕೊಂಡು ಬಂದಿದ್ದರು. ಕರಾರು ಪತ್ರವನ್ನು 1,000/- ರೂ ಮುಖಬೆಲೆ ಬಾಂಡ್ ಮೇಲೆ ಬರೆದಿದ್ದಾರೆ. ಸದರಿ ಬಾಂಡನ್ನು ಪ್ರತಿವಾದಿಯರೆ ತಹಸೀಲ್ದಾರ ಕಚೇರಿಯಲ್ಲಿ ತೆಗೆದುಕೊಂಡು ಬಂದಿದ್ದರು. ನಿಪಿ-1 ರ ಮೇಲೆ ಸ್ಟಾಂಪ್ ಮಾರಾಟ ಮಾಡಿದವರ ಸಹಿ ಮತ್ತು ಸೀಲು ಇವುದಿಲ್ಲ ಅಂದರೆ, ಸಾಕ್ಷಿ ತಹಸೀಲ್ದಾರರ ಕಚೇರಿಯಲ್ಲಿ ಸದರಿ ಬಾಂಡನ್ನು ತಂದಿದ್ದರು ಅಂತ ಹೇಳುತ್ತಾರೆ. ನಿಪಿ-1ನ್ನು ಹೊರತುಪಡಿಸಿ ಪ್ರತಿವಾದಿಯರಿಗೆ 5,50,000/- ರೂ ಹಣ ಕೊಟ್ಟಿದ್ದೇನೆ ಅಂತ ತೋರಿಸಲು ಬೇರೆ ದಾಖಲೆಗಳನ್ನು ಮಾಡಿಸಿಕೊಂಡಿಲ್ಲ. ಪ್ರತಿವಾದಿಯರಿಗೆ ಯಾವುದೆ ಹಣಕಾಸಿನ ಅಡಚಣೆ ಇರಲಿಲ್ಲ ಅಂದರೆ ಸರಿಯಲ್ಲ, ನಾನು ನಿಪಿ-1ನ್ನು ಸುಳ್ಳು ಸೃಷ್ಟಿಸಿಕೊಂಡಿದ್ದೇನೆ ಅಂದರೆ ಸರಿಯಲ್ಲ. ಕರಾರು ಪತ್ರ ಬರೆದ ವಕೀಲರು ಮದಿಹಳ್ಳಿ ಗ್ರಾಮದವರು ಅಂದರೆ ನಿಜ. ಅವರು ನಮ್ಮ ಊರ ದಣಿಗಳು ಅಂದರೆ ನಿಜ. ನಾನು, ಸಾಕ್ಷಿಧಾರರು ಮತ್ತು ಸದರಿ ದಾಖಲೆ ಬರೆದ ವಕೀಲರು ಸೇರಿಕೊಂಡು ಖೊಟ್ಟಿ ಕರಾರು ಪತ್ರ ಸೃಷ್ಟಿಸಿದ್ದೇವೆ ಅಂದರೆ ಸರಿಯಲ್ಲ. ನಾನು 2.1/2 ಎಕರೆ ಜಮೀನಿನಲ್ಲಿ ಪ್ರತಿ ವರ್ಷ 2-3 ಲಕ್ಷ ರೂ ಆದಾಯ ಗಳಿಸುತ್ತೇನೆ, ನಾನು ಎಮ್ಮೆ ಮತ್ತು ಆಡುಗಳನ್ನು ಸಹ ಸಾಕಿದ್ದೇನೆ.

Date: 17-03-2025 OS No. 198/2023

<u>( PW-1 )</u>

ನಾನು ಗಳಿಸುವ ಆದಾಯದಿಂದ ನನ್ನ ಮನೆತನ ನಡೆಸಲು ಕಷ್ಟ ಇದ್ದು, ವಾದಿಯರಿಗೆ 5,50,000/- ರೂ ಹಣ ಕೊಟ್ಟಿದ್ದೇನೆ ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ನನ್ನ ಆದಾಯ ತೋರಿಸಲು ಬ್ಯಾಂಕ್ ಖಾತೆಯ ಪಾಸಬುಕ್ಕ ಹಾಜರು ಮಾಡಿಲ್ಲ. ನಾನು ಬ್ಯಾಂಕಿನಲ್ಲಿ ಸಾಲ ಮಾಡಿದ್ದೇನೆ ಅಂದರೆ ನಿಜ. ನಾನೆ ಸಾಲದಲ್ಲಿ ಇರುವುದರಿಂದ ಪ್ರತಿವಾದಿಯರಿಗೆ ಹಣ ಕೊಡಲು ಸಾಧ್ಯವಿಲ್ಲ ಅಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ಎಲ್ಲಾ ವಿಷಯ ಸುಳ್ಳು ಇದೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

Sd/- 17.03.25

ಹಿರಿಯ ದಿವಾಣಿ ನ್ಯಾಯಾಧೀಶರು , ಹುಕ್ಕೇರಿ.